ವಿತರಿಸುವುದು ಹಾಗೆಯೇ ಬೊಂಬು, ತೇಗ, ಉರುವಲು ಮರಗಳನ್ನು ಬೆಳೆಸಿ ವಿತರಿಸಿ ಗಿರಿಜನರ ಜೀವನದ ಅವಶ್ಯಕತೆಗಳನ್ನು ಪೂರೈಸುವುದು ಹಾಗೂ ಗುಡಿ ಕೈಗಾರಿಕೆಗೆ ಪ್ರೋತ್ಸಾಹಿಸಿ ಗಿರಿಜನರ ಮಹಿಳೆಯರಿಗೆ ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವುದು.

14) **ನಿಸರ್ಗ ಪ್ರವಾಸೋದ್ಯಮ** : ನಿಸರ್ಗ ಪ್ರವಾಸಿಗಳಿಗೆ ಕರ್ನಾಟಕ ಅರಣ್ಯಗಳಲ್ಲಿ ಪ್ರವಾಸ ಮಾಡಲು ತುಂಬಾ ಅವಕಾಶವಿದೆ. ಇತ್ತೀಚೆಗೆ ದಟ್ಟ ಪ್ರದೇಶಗಳಲ್ಲಿ ಪ್ರಾಚೀನ ಕಟ್ಟಡಗಳು ಕಂಡು ಬಂದಿವೆ. ಇಲ್ಲಿ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಮತ್ತು ಸುಪ್ರಸಿದ್ಧ ಜಲಪಾತಗಳು ಸುಂದರ ನಿಸರ್ಗದತ್ತ ಅರಣ್ಯ ಪ್ರದೇಶಗಳಿಗೆ ಪ್ರವಾಸಿಗಳನ್ನು ಆಕರ್ಷಿಸಿ ವೀಕ್ಷಿಸಲು ಅನುಕೂಲವಾಗುವಂತೆ ಮೇವು, ನೀರು ಆಸನಗಳ ಇನ್ನಿತರ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದೆ. ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲುಸಹಕಾರಿಯಾಗುತ್ತದೆ.

ಔಷಧಗಾರದಲ್ಲಿ ಕಳಪೆ ಔಷಧಿ ತಯಾರಾಗುತ್ತಿರುವ ಬಗ್ಗೆ

937 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತೀಯ ವೈದ್ಯಪದ್ಧತಿ ಇಲಾಖೆಗೆ ಸೇರಿದ ಜಯನಗರದ ಕೇಂದ್ರೀಯ ಔಷಧಿಗಾರದಲ್ಲಿ ಕಳಪೆ ಔಷಧಿ ತಯಾರಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಗುತ್ತಿಗೆದಾರರು ಕಳಪೆ ದರ್ಜೆಯ ಜೀರಿಗೆ, ಬೆಲ್ಲ, ತುಪ್ಪ ಮುಂತಾದುವುಗಳನ್ನು ಸರಬರಾಜು ಮಾಡಿತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಕಾಶ್ಮೀರದಿಂದ ಬರುವ ಕುಂಕುಂ ಕೇಸರಿ ಮತ್ತು ಬೆಂಗಳೂರು ಡೈರಿ ತುಪ್ಪ ದುರುಪಯೋಗವಾಗುತ್ತಿರುವುದು ನಿಜವೇ?

ಈ) ಈ ಬಗ್ಗೆ ಸರ್ಕಾರ ಸಿ.ಒ.ಡಿ. ತನಿಖೆಗೆ ಆಜ್ಞೆ ಮಾಡಲಾಗುವುದೇ?

ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಜಯನಗರ ಕೇಂದ್ರೀಯ ಔಷಧಿಗಾರಕ್ಕೆ ಕೆಲವು ಔಷಧಿ ವಸ್ತುಗಳ ಸರಬರಾಜು

938 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?